ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1906
ಉತ್ತರಿಸುವ ದಿನಾಂಕ	16.03.2022
ಉತ್ತರಿಸುವ ಸಚಿವರು	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನು ಕ್ರಮ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ "ಪ್ರಧಾನ ಮಂತ್ರಿ ಆವಾಸ್ ಯೋಜನೆ" (ನಗರ) ಯನ್ನು ಯಾವ ವರ್ಷದಿಂದ ಅನುಷ್ಠಾನಗೊಳಿಸಲಾಗುತ್ತಿದೆ; ಈ ಯೋಜನೆಯ ರೂಪು-ರೇಷೆ ಮತ್ತು ಫಲಾನುಭವಿಗಳಿಗೆ ದೊರೆಯುವ ಸೌಲಭ್ಯಗಳು ಯಾವುವು; (ವಿವರ ನೀಡುವುದು)	ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯನ್ನು 2015ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ರೂಪುರೇಷೆಗಳು: ಈ ಯೋಜನೆಯಡಿ ಈ ಕೆಳಗಿನಂತೆ 4 ಘಟಕಗಳಿರುತ್ತವೆ:- 1. "In situ" Slum Redevelopment (ISSR); 2. Affordable Housing in Partnership (AHP); 3. Beneficiary-led Construction (BLC); and 4. Credit Linked Subsidy Scheme (CLSS). <u>"In-situ" Slum Redevelopment (ISSR)</u>: ಖಾಸಗಿ ಸಹಭಾಗಿತ್ವದೊಂದಿಗೆ ಕೊಳಚೆ ಪ್ರದೇಶಗಳನ್ನು ಪುನರಾಭಿವೃದ್ಧಿಗೊಳಿಸುವುದು. <u>Affordable Housing in Partnership (AHP)</u>: ಈ ಘಟಕದಡಿ ಸರ್ಕಾರದ ಜಮೀನಿನಲ್ಲಿ ಬಹುಮಹಡಿ ಮನೆಗಳನ್ನು ಗುತ್ತಿಗೆದಾರರಿಂದ ನಿರ್ಮಿಸಲಾಗುವುದು. <u>Beneficiary-Led Construction (BLC)</u>: ಈ ಘಟಕದಡಿ ಫಲಾನುಭವಿಗಳು ತಮ್ಮ ಸ್ವಂತ ನಿವೇಶನದಲ್ಲಿ ತಾವೇ ಸ್ವತಃ ಮನೆ ನಿರ್ಮಾಣ ಮಾಡಿಕೊಳ್ಳುವರು. <u>Credit Linked Subsidy Scheme (CLSS)</u>: ಈ ಘಟಕದಡಿ ಅರ್ಹ ಫಲಾನುಭವಿಗಳು ಬ್ಯಾಂಕ್‌ಗಳಿಂದ ಪಡೆಯುವ ಗೃಹ ಸಾಲಕ್ಕೆ ತಗಲುವ ಬಡ್ಡಿಗೆ ಪ್ರಸ್ತುತ ರೂ. 6.00 ಲಕ್ಷಗಳ ಮೊತ್ತಕ್ಕೆ ಶೇಕಡಾ 6.5 ರಷ್ಟು ಸಹಾಯಧನ ಒದಗಿಸಲಾಗುವುದು. ಫಲಾನುಭವಿಯು ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಈ ಮೇಲಿನ ಯಾವುದಾದರೂ ಒಂದು ಘಟಕದಡಿ ಸಹಾಯಧನವನ್ನು ಪಡೆದುಕೊಳ್ಳಬಹುದಾಗಿದೆ. ರಾಜ್ಯದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ AHP ಮತ್ತು BLC-Convergence ಅಡಿ ವಾಜಪೇಯಿ ನಗರ ವಸತಿ ಯೋಜನೆ, ಡಾ.ಬಿ.ಆರ್

ಅಂಬೇಡ್ಕರ್ ನಿವಾಸ್ ಯೋಜನೆ, ದೇವರಾಜ ಅರಸು ವಿಶೇಷ ವಸತಿ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ ಮತ್ತು ಈ ಯೋಜನೆಯಡಿ ಕೇಂದ್ರ ಸರ್ಕಾರವು ಪ್ರತಿ ಮನೆಗೆ ರೂ. 1.50 ಲಕ್ಷವನ್ನು ಒದಗಿಸಲಿದೆ ಮತ್ತು ರಾಜ್ಯ ಸರ್ಕಾರವು ಎಸ್.ಸಿ. / ಎಸ್.ಟಿ. ಫಲಾನುಭವಿಗಳಿಗೆ ರೂ. 2.00 ಲಕ್ಷಗಳು ಮತ್ತು ಇತರೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರೂ. 1.20 ಲಕ್ಷವನ್ನು ಒದಗಿಸಲಿದೆ.

ಒಟ್ಟಾರೆಯಾಗಿ ಈ ಯೋಜನೆಯಡಿ ಎಸ್.ಸಿ. / ಎಸ್.ಟಿ. ಫಲಾನುಭವಿಗಳು ರೂ. 3.50 ಲಕ್ಷಗಳನ್ನು (ಕೇಂದ್ರ ಮತ್ತು ರಾಜ್ಯ ಸರ್ಕಾರ ಸೇರಿ) ಮತ್ತು ಇತರೆ ಸಾಮಾನ್ಯ ವರ್ಗದ ಫಲಾನುಭವಿಗಳು ರೂ. 2.70 ಲಕ್ಷಗಳ (ಕೇಂದ್ರ ಮತ್ತು ರಾಜ್ಯ ಸರ್ಕಾರ ಸೇರಿ) ಸಹಾಯಧನವನ್ನು ಪಡೆಯಲಿದ್ದಾರೆ.

ಆ | ರಾಜ್ಯದಲ್ಲಿ ಈ ಯೋಜನೆಯಡಿ ಕಳೆದ 05 ವರ್ಷಗಳಲ್ಲಿ ನಿರ್ಮಿತವಾಗಿರುವ ಮನೆ / ಫ್ಲ್ಯಾಟ್‌ಗಳ ಸಂಖ್ಯೆ ಎಷ್ಟು; ಮತ್ತು ಎಷ್ಟು ಮನೆ / ಫ್ಲ್ಯಾಟ್‌ಗಳು ಮಾರಾಟವಾಗದೇ ಉಳಿದಿವೆ; (ಜಿಲ್ಲಾವಾರು ವಿವರವನ್ನು ನೀಡುವುದು)

ರಾಜ್ಯದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ-ನಗರದ AHP ಘಟಕದಡಿ ಕಳೆದ 5 ವರ್ಷಗಳಲ್ಲಿ ಈ ಕೆಳಗಿನಂತೆ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಯೋಜನೆಗಳ ಪ್ರಗತಿಯ ವಿವರಗಳು ಈ ಕೆಳಗಿನಂತಿವೆ:-

ಕ್ರ. ಸಂ.	ಅನುಷ್ಠಾನ ಸಂಸ್ಥೆ	ಅನುಮೋದನೆಗೊಂಡ ಮನೆಗಳ ಸಂಖ್ಯೆ	ಟೆಂಡರ್ ಆಗಿರುವ ಮನೆಗಳ ಸಂಖ್ಯೆ	ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ	ಪೂರ್ಣಗೊಂಡಿರುವ ಮನೆಗಳ ಸಂಖ್ಯೆ
1	KSDB	180253	180253	25097	39083
2	ULB	65824	36387	17126	1844
3	RGHCL	100000	52735	44305	0
4	PKGB	2211	1966	1103	556
5	BDA	876	876	128	364
ಒಟ್ಟು:		**349164**	**272217**	**87759**	**41847**

*ಸದರಿ 3,49,164 ಮನೆಗಳ ಪೈಕಿ 2,19,558 ಮನೆಗಳ ಕಾಮಗಾರಿ ಇನ್ನೂ ಪ್ರಾರಂಭಿಸಬೇಕಾಗಿರುತ್ತದೆ.

ಸದರಿ ಯೋಜನೆಯಡಿ 3,49,164 ಮನೆಗಳನ್ನು ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮಾರ್ಗಸೂಚಿಯನುಸಾರ ವಸತಿ / ನಿವೇಶನರಹಿತ ಅರ್ಹ ಬಡ ಫಲಾನುಭವಿಗಳಿಗೆ ಹಂಚಿಕೆ ಮಾಡುವುದರಿಂದ ಈ ಮನೆಗಳನ್ನು ಮಾರಾಟ ಮಾಡುವುದಿಲ್ಲ. ಈಗಾಗಲೇ ಪೂರ್ಣಗೊಂಡಿರುವ 41,847 ಮನೆಗಳ ಪೈಕಿ 26,380 ಮನಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

ಆದರೆ, "ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ 8096 -2BHK ಮನೆಗಳನ್ನು ನಿರ್ಮಿಸುತ್ತಿದ್ದು, ಸದರಿ 8096 ಮನೆಗಳನ್ನು ಮಾತ್ರ ಕಾಮಗಾರಿ ಪೂರ್ಣಗೊಂಡ ನಂತರ ನಿಯಮಾನುಸಾರ ಮಾರಾಟ ಮಾಡಲಾಗುವುದು.

ಇ | ರಾಜ್ಯದಲ್ಲಿ ಈ ಯೋಜನೆ ಮನೆ / ಫ್ಲ್ಯಾಟ್‌ಗಳ ನಿರ್ಮಾಣ ವಿಳಂಬವಾಗುತ್ತಿರುವುದರಿಂದ ಸದರಿ ಮನೆ / ಫ್ಲ್ಯಾಟ್‌ಗಳ ನಿರ್ಮಾಣ ವೆಚ್ಚ ಅಧಿಕವಾಗಿ ಫಲಾನುಭವಿಗಳಿಗೆ

ರಾಜ್ಯದಲ್ಲಿ ಎ.ಹೆಚ್.ಪಿ. ಘಟಕದಡಿ ನಿರ್ಮಾಣ ಮಾಡುವ ಯೋಜನೆಗಳಡಿ ಘಟಕ ವೆಚ್ಚವು ರೂ. 5.00 ಲಕ್ಷಗಳಿಂದ ರೂ. 10.60 ಲಕ್ಷಗಳಷ್ಟಿದ್ದು, ಈ ಪೈಕಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿ ಎಸ್.ಸಿ. / ಎಸ್.ಟಿ. ಫಲಾನುಭವಿಗೆ ರೂ. 3.50 ಲಕ್ಷಗಳು ಹಾಗೂ ಇತರೆ ಸಾಮಾನ್ಯ ವರ್ಗದ ಫಲಾನುಭವಿಗೆ ರೂ. 2.70 ಲಕ್ಷಗಳನ್ನು ಒದಗಿಸುತ್ತಿದ್ದು, ಬಾಕಿ ಮೊತ್ತವನ್ನು ಫಲಾನುಭವಿಗಳು ಸ್ವಂತ ಉಳಿತಾಯದ ಮೂಲಕ ಹಾಗೂ ಬ್ಯಾಂಕ್ ಸಾಲದ ಮೂಲಕ ಭರಿಸಬೇಕಾಗಿರುತ್ತದೆ.

	ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಆದರೆ, ಬಡ ಫಲಾನುಭವಿಗಳು ತಮ್ಮ ಪಾಲಿನ ಮೊತ್ತವನ್ನು ಭರಿಸಲು ವಿಳಂಬ ಮಾಡುತ್ತಿದ್ದಾರೆ. ಬಡ ಫಲಾನುಭವಿಗಳಿಗೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಒದಗಿಸಲು ಅನುಷ್ಠಾನ ಸಂಸ್ಥೆಗಳೇ ಸರಳೀಕೃತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ, ನಿಗದಿಪಡಿಸಿರುವ ದಾಖಲೆಗಳನ್ನು ಫಲಾನುಭವಿಗಳಿಂದ ಪಡೆದು ಬ್ಯಾಂಕ್‌ಗಳಿಗೆ ಸಲ್ಲಿಸುತ್ತಿವೆ. ಮುಂದುವರೆದು, ರಾಜ್ಯ ಮಟ್ಟದ ಅನುಷ್ಠಾನ ಸಂಸ್ಥೆಯಾದ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತವು ಲೀಗಲ್ ಅಡ್ವೈಸರ್ ಹಾಗೂ ವ್ಯಾಲುವರ್‌ಗಳನ್ನು ನೇಮಕ ಮಾಡಿದ್ದು, ಒಂದು ಯೋಜನೆಗೆ ಒಂದು ಮಾಸ್ಟರ್ ವ್ಯಾಲುವೇಷನ್ / ಲೀಗಲ್ ಒಪೀನಿಯನ್ ವರದಿಯನ್ನು ಸಲ್ಲಿಸಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳೇ ತ್ರಿಪಕ್ಷೀಯ ಒಪ್ಪಂದ ಪತ್ರ, ತಾತ್ಕಾಲಿಕ ಹಂಚಿಕೆ ಪತ್ರ ಹಾಗೂ ರೇರಾ ನೋಂದಣಿ ಸಂಬಂಧದ ಪ್ರತಿಗಳನ್ನು ಸಲ್ಲಿಸುತ್ತಿದ್ದಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಿ, ಬ್ಯಾಂಕ್‌ಗಳು ಫಲಾನುಭವಿಗಳಿಗೆ ಸಾಲ ಮಂಜೂರು ಮಾಡಿ, ಹಣ ಬಿಡುಗಡೆ ಮಾಡಿದಲ್ಲಿ, ಕಾಮಗಾರಿಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲಾಗುವುದು.

[ಸಂಖ್ಯೆ: ವಇ 74 ಹೆಚ್‌ಎಫ್‌ಎ 2022]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು.